ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 38,28,428.00 ಹೆಕ್ಟೇರ್ ಅರಣ್ಯ ಪ್ರದೇಶವಿರುತ್ತದೆ. ಇದರಲ್ಲಿ 1,17,556 ಹೆಕ್ಟೇರ್ ಪ್ರದೇಶವು ಒತ್ತುವರಿಯಾಗಿರುತ್ತದೆ.

ಆ) ಬೀರೂರು ಅರಣ್ಯ ಕ್ಷೇತ್ರದಲ್ಲಿರುವ ಅರಣ್ಯ ಭೂಮಿ ಮತ್ತು ಒತ್ತುವರಿಯಾದ ಭೂಮಿಯ ವಿವರ ಕೆಳಕಂಡಂತಿದೆ. (ಎಕರೆಗಳಲ್ಲಿ)

ಹೋಬಳಿಯ ಹೆಸರು	ಒಟ್ಟು ಅರಣ್ಯ ಭೂಮಿ	ಒತ್ತುವರಿಯಾಗಿರುವ ಅರಣ್ಯ ಭೂಮಿ
ಬೀರೂರು	18804.77	1628.14
ಸಖರಾಯಪಟ್ಟಣ	6487.41	52.18
ಲಕ್ಕಾ	32321.14	2575.15
ಲಿಂಗದಹಳ್ಳಿ	22492.38	2707.22
ಒಟ್ಟು	80105.70	6962.69

ಇ) ಹೌದು ಅರ್ಹವಲ್ಲದ ಪ್ರಕರಣಗಳಲ್ಲಿ ಹಾಗೂ ದಿನಾಂಕ: 27.4.1978ರ ನಂತರದಲ್ಲಿ ಆದ ಅತಿಕ್ರಮಣಗಳನ್ನು ತೆರವುಗೊಳಿಸಲಾಗುವುದು.

ಈ) ಕೇಂದ್ರ ಸರ್ಕಾರದ ನಿರ್ದೇಶದನ್ವಯ ದಿ: 27.4.1978ರ ಪೂರ್ವದಲ್ಲಿ ಆಗಿರುವ ಒತ್ತುವರಿಗಳನ್ನು ಮಾತ್ರ ಸಕ್ರಮಗೊಳಿಸಲು ಅವಕಾಶವಿರುವುದರಿಂದ 15 ವರ್ಷದಿಂದ ಒತ್ತುವರಿ ಮಾಡಿರುವ ರೈತರಿಗೆ ಜಮೀನು ಮಂಜೂರು ಮಾಡುವುದು ನಿಯಮಾವಳಿಯನ್ವಯ ಸಾಧ್ಯವಿರುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆ ಬೀರೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಫಾರಂ 50 ಮತ್ತು 53 ರಲ್ಲಿನ ಅರ್ಜಿಗಳಿಗೆ ಸಾಗುವಳಿ ಪತ್ರ ನೀಡಿಕೆ

78 (125) ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆ ಬಿರೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಕ್ಕೆ ಎಷ್ಟು ನಮೂನೆ 50 ಮತ್ತು ನಮೂನೆ 53 ಅರ್ಜಿಗಳು ಬಂದಿವೆ;

ಆ) ಅದರಲ್ಲಿ ಎಷ್ಟು ಅರ್ಜಿಗಳನ್ನು ವಜಾಗೊಳಿಸಲಾಗಿದೆ; ಮತ್ತು ಎಷ್ಟು ಅರ್ಜಿಗಳನ್ನು ಮಂಜೂರು ಮಾಡಲಾಗಿದೆ; (ಪಟ್ಟಿ ಸಹಿತ ವಿವರ ನೀಡುವುದು);

ಇ) ಮಂಜೂರು ಅರ್ಜಿಗಳಿಗೆ ಸಾಗುವಳಿ ಪತ್ರ ನೀಡಲಾಗಿದೆಯೇ;

ಈ) ಇಲ್ಲವಾದಲ್ಲಿ ನೀಡದಿರಲು ಕಾರಣವೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ಸಚಿವರು) :

ಅ) ನಮೂನೆ 50 ರಲ್ಲಿ 12,659 ಹಾಗೂ ನಮೂನೆ 54ರಲ್ಲಿ 14,611 ಅರ್ಜಿಗಳನ್ನು ಸ್ವೀಕರಿಸಲಾಗಿದೆ.

ಆ)	ನಮೂನೆ 50		ನಮೂನೆ 53	
ತಾಲ್ಲೂಕು	ಮಂಜೂರಿ	ವಜಾ	ಮಂಜೂರಿ	ವಜಾ
ಚಿಕ್ಕಮಗಳೂರು	1442	1952	185	----
ತರೀಕೆರೆ	372	2828	22	1298
ಕಡೂರು	1542	2336	198	1433
ಒಟ್ಟು	3356	7589	405	4556

ಇ) ನಮೂನೆ 50 ರಲ್ಲಿ 1874 ಮತ್ತು ನಮೂನೆ 53 77 ಪ್ರಕರಣಗಳಲ್ಲಿ ಸಾಗುವಳಿ ಸಾಗುವಳಿ ಚೀಟಿ ನೀಡಲಾಗಿದೆ.

ಈ) ಮಂಜೂರಾದ ಪ್ರಕರಣಗಳಲ್ಲಿ 1810 ಸಾಗುವಳಿ ಚೀಟಿ ನೀಡಲು ಬಾಕಿ ಇದೆ. ಬಾಕಿ ಇಡಲು ಕಾರಣ ಈ ಕೆಳಕಂಡಂತಿದೆ.

1005 ಪ್ರಕರಣಗಳಲ್ಲಿ ..... ಪಾವತಿಸಿರುವುದಿಲ್ಲ

22 ಪ್ರಕರಣಗಳಲ್ಲಿ ಅರಣ್ಯ ವ್ಯಾಪ್ತಿಯಲ್ಲಿರುವ ಬಗ್ಗೆ ವಿವಾದ

57 ಪ್ರಕರಣಗಳಲ್ಲಿ ಅಮೃತ್ ಮಹಲ್ ಕಾವಲ್ ಜಮೀನಾಗಿದ್ದು, ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

726 ಪ್ರಕರಣಗಳಲ್ಲಿ ಕಾನೂನು ಬಾಹಿರವಾಗಿ ಸಕ್ರಮಗೊಳಿಸಿರುವ ಆರೋಪದ ಬಗ್ಗೆ ಇಲಾಖಾ ವಿಚಾರಣೆಗಾಗಿ

1810

ಬೆಳ್ತಂಗಡಿ ತಾಲ್ಲೂಕು ಮೋಜಣಿ ಕಛೇರಿಗೆ ಸ್ವಂತ ಕಟ್ಟಡದ ವ್ಯವಸ್ಥೆ

82 (115) ಶ್ರೀ ಪ್ರಭಾಕರ ಬಂಗೇರ್ ಕೆ. (ಬೆಳ್ತಂಗಡಿ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೋಜಣಿ ಕಛೇರಿಗೆ ಸಂಬಂಧಪಟ್ಟ ಹಾಗೆ ರಾಜ್ಯದಲ್ಲಿ ಎಷ್ಟು ತಾಲ್ಲೂಕು ಮತ್ತು ಜಿಲ್ಲಾ ಕಛೇರಿಗಳು ಸ್ವಂತ ಕಟ್ಟಡದಲ್ಲಿವೆ ಸ್ವಂತ ಕಟ್ಟಡವನ್ನು ವ್ಯವಸ್ಥೆಗೊಳಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೆ?

ಆ) ಬೆಳ್ತಂಗಡಿ ತಾಲ್ಲೂಕು ಮೋಜಣಿ ಕಛೇರಿ ಕಟ್ಟಡದ ನಿರ್ಮಾಣಕ್ಕಾಗಿ ಜಮೀನು ಮಂಜೂರಾಗಿದೆಯೇ? ಹಾಗಿದ್ದಲ್ಲಿ ಅವರ ವಿವರಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) ಭೂಮಾಪನ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ತಾಲ್ಲೂಕು ಮಟ್ಟದಲ್ಲಿ 175 ಕಛೇರಿಗಳು, ಜಿಲ್ಲಾ ಮಟ್ಟದಲ್ಲಿ 27 ಕಛೇರಿಗಳು ಕಾರ್ಯ ನಿರ್ವಹಿಸುತ್ತಿದ್ದು ಇವುಗಳ ಪೈಕಿ 61 ತಾಲ್ಲೂಕು ಮಟ್ಟದ ಕಛೇರಿಗಳು ಮತ್ತು 14 ಜಿಲ್ಲಾ ಮಟ್ಟದ ಕಛೇರಿಗಳು ಸರ್ಕಾರಿ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮದಡಿಯಲ್ಲಿ ಲಭ್ಯವಿರುವ ರೂ. 120.00 ಲಕ್ಷಗಳ ಅನುದಾನದಲ್ಲಿ ಭೂಮಾಪನ ಇಲಾಖೆಯ ಅಧೀನ ಕಛೇರಿಗಳ ಸಲುವಾಗಿ ಸ್ವಂತ ಕಟ್ಟಡವನ್ನು ಹೊಂದಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇದಲ್ಲದೆ ಹತ್ತನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ದಾಖಲೆ ಕೊಠಡಿಗಳನ್ನು ನಿರ್ಮಿಸಲು ರೂ. 261 ಲಕ್ಷಗಳ ಅನುದಾನ ಸಹ ಲಭ್ಯವಿರುತ್ತದೆ.